ಈಗ ಡ್ರಿಂಕ್ಸಿನ ಸವಾಲು ಎದುರಾಯಿತು.

"ನಾನು ಲಂಚ್ ವೇಳೆಯಲ್ಲಿ ಡ್ರಿಂಕ್ಸ್ ತೆಗೆದುಕೊಳ್ಳುವುದಿಲ್ಲ..." ಆಕೆ ಹೇಳಿದಳು.

"ನಾನೂ ಅಷ್ಟೇ..." ನಾನು ತಕ್ಷಣ ಹೇಳಿದೆ. ನಾನು ಹೇಳಿದ್ದು ಅವಳು ಕೇಳಿಸಿಕೊಳ್ಳಲಿಲ್ಲವೆಂಬಂತೆ,

"...ವೈಟ್ ವೈನನ್ನು ಹೊರತು ಪಡಿಸಿ!" ಅಂದಳು. ಮುಂದುವರೆಸಿ,

"ಈ ಫ್ರೆಂಚ್ ವೈನ್‌ಗಳು ಎಷ್ಟೊಂದು ಲೈಟಾಗಿರುತ್ತವೆಂದರೆ ಲಂಚ್‌ಗಂತೂ ಹೇಳಿ ಮಾಡಿಸಿದ ಪಾನಿಯಗಳು. ಡೈಜೆಶನ್‌ಗೆ ತುಂಬಾ ಒಳ್ಳೇದು, **You know?**" ಎಂದಳು.

"ಹಾಗಾದ್ರೆ ಏನು ತಗೋತೀರಿ?" ಅಂತ ನನ್ನ ಅಸಹನೆಯನ್ನು ತೋರ್ಪಡಿಸದೆ ನಾನು ಕೇಳಲೇ ಬೇಕಾಯಿತು.

ಆಕೆ ನನ್ನ ಕಡೆಗೆ ನೋಡಿ ಸುಂದರವಾಗಿ ನಕ್ಕಳು. ಆಕೆಯ ಶುಭ್ರ ಬಿಳಿ ದಂತಗಳು ಹೊಳೆಯುತ್ತಿದ್ದವು.

"ಶಾಂಪೇನ್ ಬಿಟ್ಟು ಬೇರಾವುದೇ ವೈನ್‌ಗಳನ್ನು ಕುಡಿಯಬಾರದೆಂದು ನನ್ನ ಡಾಕ್ಟರ್ ಹೇಳಿದ್ದಾರೆ."

ನಾನು ಬಿಳುಚಿಕೊಂಡಿದ್ದನ್ನು ಆಕೆ ನೋಡಿದಳೋ, ಇಲ್ಲ ಗಣನೆಗೆ ತೆಗೆದುಕೊಳ್ಳಲಿಲ್ಲವೋ ನನಗೆ ಗೊತ್ತಾಗಲಿಲ್ಲ.

"ನೀವೇನು ಕುಡಿಯುತ್ತೀರಿ?" ಆಕೆ ನನ್ನ ಕಡೆಗೆ ತಿರುಗಿ ಕೇಳಿದಳು.

"ನೀರು!... ಬರೇ ನೀರು, ಅಷ್ಟೇ! ಮಧ್ಯಾಹ್ನದ ಹೊತ್ತಿನಲ್ಲಿ ಯಾವುದೇ ಅಮಲು ಪದಾರ್ಥಗಳನ್ನು ಮುಟ್ಟಬಾರದೆಂದು ನನ್ನ ಡಾಕ್ಟರ್ ಎಚ್ಚರಿಸಿದ್ದಾರೆ."

ಆಕೆಗಾಗಿ ನಾನು ಅರ್ಧ ಬಾಟಲು ಶಾಂಪೇನ್ ಆರ್ಡರ್ ಮಾಡಿದೆ.

ಆಕೆ ಕ್ಯಾವಿಯರ್, ಸಾಮಾನ್ ಮೀನು ಚಪ್ಪರಿಸುತ್ತಿರುವಂತೆಯೇ ಕಲೆ, ಸಾಹಿತ್ಯ ಮತ್ತು ಸಂಗೀತದ ಬಗ್ಗೆ ಪಾಂಡಿತ್ಯಪೂರ್ಣವಾಗಿ ಚಕಚಕನೆ ಮಾತನಾಡತೊಡಗಿದಳು. ನಾನೋ, ಕೊನೆಯಲ್ಲಿ ಬಿಲ್ಲು ಎಷ್ಟಾಗಬಹುದೋ ಎಂಬ ಆತಂಕದಿಂದ ಮನಸ್ಸಿನೊಳಗೇ ಲೆಕ್ಕಾಚಾರ ಮಾಡುತ್ತಾ, ಕೊರಗುತ್ತಾ ಮುಳ್ಳಿನ ಬೇಲಿಯ ಮೇಲೆ ಕುಳಿತಿರುವವನಂತೆ ಒದ್ದಾಡುತ್ತಿದ್ದೆ. ನಾನು ಆರ್ಡರ್ ಮಾಡಿದ್ದ ಮಟನ್ ಚಾಪ್ಸ್ ಮೇಜಿಗೆ ಬರುವಷ್ಟರಲ್ಲಿ ಆಕೆ ಒಂದು ದೊಡ್ಡ ಪ್ರವಚನವನ್ನೇ ಶುರುಮಾಡಿಕೊಂಡಿದ್ದಳು.

"ನಾನು ಗಮನಿಸಿರುವಂತೆ ನಿಮಗೆ ಮಧ್ಯಾಹ್ನದ ಹೊತ್ತಿನಲ್ಲಿ ತುಂಬಾ **heavy** ಮೀಲ್ಸ್ ತೆಗೆದುಕೊಳ್ಳುವ ಅಭ್ಯಾಸವಾಗಿ ಬಿಟ್ಟಿದೆ. ಇದು ನಿಮ್ಮ ಆರೋಗ್ಯಕ್ಕೆ ಖಂಡಿತ ಒಳ್ಳೇದಲ್ಲ! ನೀವೇಕೆ ನನ್ನ ಉದಾಹರಣೆಯನ್ನು ತೆಗೆದುಕೊಳ್ಳಬಾರದು? ಹೊಟ್ಟೆಗೂ ನೆಮ್ಮದಿ, ಆರೋಗ್ಯಕ್ಕೂ ಒಳ್ಳೇದು."

"ನಾನು ಈ ಜುಜುಬಿ ಮಟನ್ ಚಾಪ್ಸ್ ಬಿಟ್ಟರೆ ಬೇರೇನೂ ತೆಗೆದುಕೊಳ್ಳಲಿಲ್ಲವಲ್ಲ?" ಎಂದೆ, ಬಿಲ್ಲನ್ನು ತರುತ್ತಿದ್ದ ವೇಯ್ಟರನನ್ನು ಗಮನಿಸುತ್ತಾ.

ಆಕೆ ದೂರದಿಂದಲೇ ಕೈ ಸನ್ನೆ ಮಾಡಿ ವೇಯ್ಟರನನ್ನು ಅಲ್ಲೇ ನಿಲ್ಲಿಸಿದಳು.

"ನನ್ನ ಲಂಚ್ ಎಂದರೆ ತುಂಬಾ ತುಂಬಾನೇ ತುಂಬಾ ಲೈಟ್! ಲಂಚ್ ಅನ್ನೋದು ಒಂದು ನೆಪವಷ್ಟೇ! ಪರಸ್ಪರ ಮಾತನಾಡಲು, ಹರಟಲು ಒಂದು ನೆಪ ಬೇಕಷ್ಟೇ? ಅಷ್ಟಲ್ಲದೆ, ಬರೇ ಊಟಕ್ಕಾಗಿಯೇ ಯಾರು ಸೇರುತ್ತಾರೆ ಅಲ್ಲವೇ?... ಆದರೂ..."

"ಆಸ್ಪಾರಾಗಸ್" (ದುಬಾರಿಯಾದ ಪಾಶ್ಚಾತ್ಯ ತರಕಾರಿ ದಂಟುಗಳು. ಭಾರತದಲ್ಲಿ ಅವಕ್ಕೆ ಕೇಜಿಗೆ ಐನೂರು ರೂಪಾಯಿ ಮೇಲ್ಪಟ್ಟು ಬೆಲೆ) ಎಂದರೆ ನನಗೆ ಜೀವ. ಅದೂ, ಇದ್ದರೆ ಮಾತ್ರ! ಪ್ಯಾರಿಸ್‌ಗೆ ಬಂದೂ ಆಸ್ಪಾರಾಗಸ್‌ನ ರುಚಿ ಸವಿಯದಿದ್ದರೆ ಏನು ಪ್ರಯೋಜನ? ನಿಜಕ್ಕೂ ಲಜ್ಜಾಸ್ಪದ ವಿಷಯ. ಅಲ್ವೇ?"

ನನ್ನ ಹೃದಯದ ಬಡಿತ ತಾಳತಪ್ಪತೊಡಗಿತು. ಆಸ್ಪಾರಾಗಸ್ ದಂಟುಗಳ ಕಟ್ಟನ್ನು ನಾನು